# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 1/2020</u>

ಅ.ಸಾ. 01

ದೊ.ಸಾ. 01

| | | |
|---|---|---|
| ಸಾಕ್ಷಿಯ ಹೆಸರು | ಃ | ಕಲ್ಲನಗೌಡ ಪಾಟೀಲ |
| ತಂದೆ ಹೆಸರು | ಃ | ವಿರೂಪಾಕ್ಷಗೌಡ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಪಿ ಡಿ ಓ., ಮಿಶ್ರಿಕೋಟಿ ಪಂಚಾಯತಿ |
| ವಾಸಸ್ಥಳ | ಃ | ಕೋಟೂರ, ತಾಃ ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 30/08/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

2016 ರಿಂದ ಸೆಪ್ಟೆಂಬರ್ 2018 ರವರೆಗೆ ನಾನು ಪಿ ಡಿ ಓ., ಆಗಿ ಹಂಗರಕಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ. ಚಾಸಾ.4 ರುದ್ರಪ್ಪ ಮುರಾರಿ ಆ ಸಮಯದಲ್ಲಿ ಪಂಚಾಯತಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ. ಚಾಸಾ.5 ರಿಂದ ಚಾಸಾ.8 ಆ ಸಮಯದಲ್ಲಿ ಗ್ರಾಮಪಂಚಾಯತಿಯ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಚಾಸಾ.10 ರಿಂದ 12 ಆ ಸಮಯದಲ್ಲಿ ಹಂಗರಕಿ ಪಂಚಾಯತಿಯ ಸದಸ್ಯರಾಗಿದ್ದರು. ಚಾಸಾ.9 ಆ ಸಮಯದಲ್ಲಿ ಪಂಚಾಯತಿಯ ಅಧ್ಯಕ್ಷರಾಗಿದ್ದರು. ನನಗೆ ಚಾಸಾ.13 ರವರ ಪರಿಚಯ ಇಲ್ಲ. ನನಗೆ ಆರೋಪಿಯ ಪರಿಚಯವಿದೆ.

2. ದಿಃ15/02/2018 ರಂದು ಎನ್ ಎಲ್ ಎಂ ಎನ್ನುವ ಸ್ಕೀಂ ನಡಿಯಲ್ಲಿ ಪಂಚಾಯತಿ ಕಚೇರಿಯ ತಪಾಸಣೆ ಇದ್ದ ಕಾರಣ ದಿಃ 14/02/2018 ರಂದು ಎಲ್ಲಾ ಕಡತಗಳನ್ನು ಸರಿಯಾಗಿ ಇಟ್ಟುಕೊಳ್ಳುವಂತೆ ನಾನು ಹಂಗರಕಿ ಪಂಚಾಯತಿಯ ಸಿಬ್ಬಂದಿಗಳಿಗೆ ಹೇಳಿದ್ದೆ. ದಿಃ 15/02/2018 ರಂದು ನನ್ನ ಆರೋಗ್ಯದ ಸಮಸ್ಯೆಯ ನಿಮಿತ್ತ ನಾನು ಧಾರವಾಡದ ಎಸ್ ಡಿ ಎಂ ಆಸ್ಪತ್ರೆಗೆ ಚಿಕಿತ್ಸೆಗಾಗಿ ತೋರಿಸಲು ಹೋಗಿದ್ದೆ. ಆ ದಿನ ನನಗೆ ವೈದ್ಯರು ಸಿಗಲಿಲ್ಲ. ಕಾರಣ ನಾನು ಧಾರವಾಡದ ತಾಲೂಕ ಪಂಚಾಯತಿ ಕಚೇರಿಗೆ ಹೋದೆ.

3. ಮೇಲೆ ಹೇಳಿದ ದಿನ ಬೆಳಿಗ್ಗೆ ಸುಮಾರು 11.00 ಗಂಟೆ ಸಮಯಕ್ಕೆ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.4 ರುದ್ರಪ್ಪ ಮುರಾರಿ ಫೋನ್ ಮಾಡಿ, ಗ್ರಾಮ ಪಂಚಾಯತಿ ದಾಖಲೆಗಳಿಗೆ ಬೆಂಕಿ ಹತ್ತಿರುವುದಾಗಿ ಹೇಳಿದ. ನಾನು ಆತನನ್ನು ಯಾವ ರೀತಿ ಬೆಂಕಿ ಹತ್ತಿತು, ನೀವೇನಾದರೂ ನೋಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು ಆಕಸ್ಮಿಕವಾಗಿ ಬೆಂಕಿ ಹತ್ತಿರಬಹುದು ಎಂದು ಹೇಳಿದರು. ಅದರಂತೆ ನಾನು ಗರಗ ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.1 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.1(ಎ) ಎಂದು ಗುರ್ತಿಸಲಾಯಿತು.

4. ನನಗೆ ಕಿಡ್ನಿಯಲ್ಲಿ ಸ್ಟೋನ್ ಆಗಿದ್ದು ಹಾಗೂ ಬೆನ್ನು ನೋವು ಇದ್ದ ಕಾರಣ ದಿಃ 16/02/2018 ರಿಂದ 27/02/2018 ರವರೆಗೆ ನಾನು ರಜೆ ಪಡೆದುಕೊಂಡಿದ್ದೆ. ಆನಂತರ ನನಗೆ ಮೂರು ದಿನಗಳ ತರಬೇತಿ ಇತ್ತು. ನಾನು ರಜೆ ಮತ್ತು ತರಬೇತಿಯನ್ನು ಮುಗಿಸಿ ನನ್ನ ಕರ್ತವ್ಯಕ್ಕೆ ಹಾಜರಾದೆ. ನಾನು ಕಚೇರಿಗೆ ಬಂದ ನಂತರ ನಮ್ಮ ಕಚೇರಿಯ ಸಿಬ್ಬಂದಿಗಳನ್ನು ಮತ್ತು ಪಂಚಾಯತಿಯ ಸದಸ್ಯರನ್ನು ವಿಚಾರಣೆ ಮಾಡಿದೆ. ದಿಃ 15/02/2018 ರಂದು ಮುಂಜಾನೆ 10.45 ಗಂಟೆಗೆ ಗ್ರಾಮ ಪಂಚಾಯತಿ ಕಚೇರಿಯ ಒಳಗೆ ಬಂದು, ಕಚೇರಿಯಲ್ಲಿದ್ದ ಹಣಕಾಸಿಗೆ ಸಂಬಂಧಪಟ್ಟ ದಾಖಲೆಗಳನ್ನು, ಎನ್.ಆರ್.ಇ.ಜಿ.ಫೈಲ್‌ಗಳು, ಎಸ್.ಬಿ.ಎಂ. ಫೈಲ್‌ಗಳು, ಗ್ರಾಮ ಪಂಚಾಯತಿಯ ನಡಾವಳಿಗಳು ಮತ್ತು ಓಚರ್ ಗಳನ್ನು ಗ್ರಾಮ ಪಂಚಾಯತಿಯ ಬಾಗಿಲಿನಿಂದ ಹೊರಗೆ ತಂದು ಹಾಕಿ, ಅವುಗಳಿಗೆ ಬೆಂಕಿ ಹಚ್ಚಿದ್ದಾಗಿ ತಿಳಿದುಬಂತು. ಬೆಂಕಿ ಹಚ್ಚಿದ ನಂತರ ಅಲ್ಲಿಂದ ಆರೋಪಿ ಓಡಿ ಹೋಗಿದ್ದಾನೆ ಎಂದು ಗೊತ್ತಾಯಿತು.

5. ಬೆಂಕಿ ಹತ್ತಿರುವುದನ್ನು ನೋಡಿ ಸಿಬ್ಬಂದಿಗಳೆಲ್ಲ ಮತ್ತು ಗ್ರಾಮಸ್ಥರು ಸೇರಿ ಬೆಂಕಿಯನ್ನು ಆರಿಸಿದ್ದಾರೆ. ಬೆಂಕಿಯಿಂದಾಗಿ ಕೆಲವು ಕಡತಗಳು ಸಂಪೂರ್ಣ ಸುಟ್ಟು ಹೋಗಿದ್ದು, ಇನ್ನೂ ಕೆಲವು ಕಡತಗಳು ಭಾಗಶಃ ಸುಟ್ಟಿದ್ದವು. ಯಾವುದೋ ಒಂದು ಉದ್ದೇಶದಿಂದ ಆರೋಪಿ ಕಡತಗಳಿಗೆ ಬೆಂಕಿ ಹಚ್ಚಿ ಸುಟ್ಟಿದ್ದಾನೆ ಎಂದು ಗೊತ್ತಾಯಿತು. ಆನಂತರ ನಾನು ದಿಃ 01/03/2018 ರಂದು ಗರಗ ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ಸದರಿ ದೂರನ್ನು ನೋಡುತ್ತಿದ್ದು, ಅದಕ್ಕೆ ನಿಪಿ.2 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.2(ಎ) ಎಂದು ಗುರ್ತಿಸಲಾಯಿತು.

ಎಸ್.ಸಿ. ಸಂಖ್ಯೆ.1/2020

ಅ.ಸಾ. 01

6. ದಿಃ 16/02/2018 ರಂದು ಪೊಲೀಸರು ಜಾಗಕ್ಕೆ ಬಂದು ಪಂಚನಾಮೆ ಮಾಡಿದ್ದಾರೆ. ಭಾಗಶಃ ಸುಟ್ಟುಹೋದ ಕಡತಗಳನ್ನು ಮತ್ತು ರಜಿಸ್ಟರ್ ಗಳನ್ನು ಪೊಲೀಸರು ಆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡಿದ್ದಾರೆ. ಒಂದು ಡಬ್ಬಿಯಲ್ಲಿ ಭಾಗಶಃ ಸುಟ್ಟು ನಾಶವಾದ ಕೆಲವು ದಾಖಲೆಗಳು ಮತ್ತು ಫೈಲ್ಗಳು ಇದ್ದು, ಅವುಗಳಿಗೆ ಮುಮಾ.1 ಎಂದು ಗುರ್ತಿಸಲಾಯಿತು. ದಾಖಲೆಗಳಿಗೆ ಬೆಂಕಿ ಹಚ್ಚಿದ ಉಮೇಶ ರಾಮಣ್ಣವರರವರನ್ನು ನೋಡಿದರೆ ಗುರ್ತಿಸುತ್ತೇನೆ. ಆತ ನ್ಯಾಯಾಲಯದಲ್ಲಿದ್ದ ಆರೋಪಿಯಾಗಿದ್ದಾನೆ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರು ಸಮಯ ಕೋರುತಾತ್ರೆ. ಕಾರಣ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

30/08/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.

**ಇಂದು ದಿಃ 17/11/2021 ರಂದು ಸಾಕ್ಷಿ ಕಲ್ಲನಗೌಡ ಪಾಟೀಲರವರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

7. ದಿಃ 15-2-2018 ರಂದು ದೂರು ಕೊಡುವ ಮೊದಲು ನಮ್ಮ ಕಚೇರಿಗೆ ಹೋಗಿ ನನಗೆ ಹೇಳಿದಂತ ಕಡತಗಳು ಸುಟ್ಟ ಮಾಹಿತಿಯು ಸರಿಯಾಗಿದೆಯಾ ಅಥವಾ ಇಲ್ಲ ಎಂದು ನಾನು ಪರಿಶೀಲನೆ ಮಾಡಿಲ್ಲ. ದಿಃ 15-2-2018 ರಂದು ಧಾರವಾಡಕ್ಕೆ ಎಸ್ ಡಿ ಎಂ ಆಸ್ಪತ್ರೆಗೆ ಹೋಗುವ ಮೊದಲು ಮುಖ್ಯ ಕಚೇರಿ ಬಿಡಲು ನಾನು ನಮ್ಮ ಮೇಲಾಧಿಕಾರಿಗಳ ಲಿಖಿತ ಅನುಮತಿ ಪಡೆದಿರಲಿಲ್ಲ. ಸಾಕ್ಷಿ ಮುಂದುವರೆದು ಪೋನ ಮುಖಾಂತರ ಅನುಮತಿ ಕೋರಿದ್ದೆ ಎನ್ನುತ್ತಾರೆ. ದಿಃ15-2-2018 ರಂದು ನಮ್ಮ ಕಚೇರಿಯ ದಾಖಲೆಗಳನ್ನು ಕೊಡುವ ಅವಶ್ಯಕತೆ ಇದ್ದ ಕಾರಣ ನಾನು ತಾಲೂಕು ಪಂಚಾಯತಿ ಕಚೇರಿಗೆ ಹೋಗಿದ್ದೆ. ದಿಃ 15-2-2018 ರಂದು ವರದಿಯನ್ನು ಪೋಲಿಸ್ ಠಾಣೆಯಲ್ಲೇ ತಯಾರಿಸಿದ್ದೇನೆ.

8. ದಿಃ 15-2-2018 ರಂದು ಕಚೇರಿಗೆ ಹೋಗುವದಕ್ಕೆ ನನಗೆ ಅಂಜಿಕೆ ಬಂದ ಕಾರಣ ನಾನು ನೇರವಾಗಿ ಪೋಲಿಸ್ ಠಾಣೆಗೆ ಹೋದೆ. ದಿಃ 15-2-2018 ರಂದು ಪಂಚಾಯತಿಯ ಇತರೆ ಸಿಬ್ಬಂದಿಗಳು ಕೆಲಸ ಮಾಡಿದ್ದಾರೆ. ದಿಃ 16-2-2018 ರಿಂದ ದಿಃ27-2-2018 ರವರೆಗೆ ನಾನು ರಜೆ ಪಡೆದ ಅವಧಿಯಲ್ಲಿ ಯಾರನ್ನೂ ನನ್ನ ಪ್ರಭಾರದಲ್ಲಿ ಇರಿಸಿರಲಿಲ್ಲ. ನಾನು ಪುನಃ ಹೇಳುತ್ತೇನೆ ಯಾರನ್ನು ಕೊಟ್ಟಿದ್ದರು ಎಂಬ ಬಗ್ಗೆ ನನ್ನ ಗಮನದಲ್ಲಿಲ್ಲ. ದಿಃ 16-2-2018 ರಿಂದ 27-2-2018 ರ ಅವಧಿಯಲ್ಲಿ ನಾನು ನಮ್ಮ ಕಚೇರಿಗೆ ಭೇಟಿ ಕೊಟ್ಟಿದ್ದೆ. ದಿಃ16-2-2018 ರಂದು ಸುಟ್ಟ ವಿಷಯವನ್ನು ಖಚಿತಪಡಿಸಿಕೊಳ್ಳಲು ಕಚೇರಿಗೆ ಭೇಟಿ ಕೊಟ್ಟಿದ್ದೆ. ನಾನು ವೈದ್ಯಕೀಯ ರಜೆ ಮೇಲೆ ಇದ್ದ ಕಾರಣ 27-2-2018 ರ ವರೆಗೆ ಬೇರೆ ದಿನಗಳಂದು ಭೇಟಿ ಕೊಟ್ಟಿಲ್ಲ.

9. ನನಗೆ ಚಿಕಿತ್ಸೆ ಪಡೆಯುವಾಗ ಬೆಡ್ ರೆಸ್ಟ ನೀಡಿರಲಿಲ್ಲ. ಜಲಾನಯನದ ಬಗ್ಗೆ ನಾನು ರಜೆಯಿಂದ ಬಂದ ನಂತರ ತರಬೇತಿ ಇತ್ತು. ತರಬೇತಿ ಅವಧಿಯಲ್ಲಿ ನಾನು ತರಬೇತಿಯಲ್ಲಿದ್ದ ಬಗ್ಗೆ ಕಚೇರಿ ಕಡತದಲ್ಲಿ ನಮೂದಾಗಿದೆ. ನಾನು ತರಬೇತಿಯಲ್ಲಿದ್ದ ಬಗ್ಗೆ ಪೊಲೀಸರಿಗೆ ದಾಖಲೆಗಳನ್ನು ಕೊಟ್ಟಿಲ್ಲ.

10. ನಾನು ಹಂಗರಕಿ ಗ್ರಾಮದಲ್ಲಿ ವಾಸವಾಗಿಲ್ಲ. ಸಾಕ್ಷಿ ಮುಂದುವರೆದು ನಾನು ಕೊಟೂರು ಗ್ರಾಮದಲ್ಲಿ ವಾಸವಾಗಿದ್ದೇನೆ ಎನ್ನುತ್ತಾರೆ. ಗ್ರಾಮ ಪಂಚಾಯತಿಯಲ್ಲಿ 3 ವಿಭಾಗಗಳು ಇದ್ದು

ಒಂದು ವಿಭಾಗದಲ್ಲಿ ಸಿಬ್ಬಂದಿಗಳು ಇರುತ್ತಾರೆ ಇನ್ನೊಂದರಲ್ಲಿ ಪಿ ಡಿ ಓ ರವರು ಮತ್ತು 3 ನೇದರಲ್ಲಿ ಕಂಪ್ಯೂಟರ ಸೆಕ್ಷನ್ ಇದೆ. ನಮ್ಮ ಕಚೇರಿ ಸಿಬ್ಬಂದಿಗಳಿಗೆ ಯಾವ ವಿಭಾಗದಲ್ಲಿ ಕೆಲಸ ಮಾಡಬೇಕೆಂಬ ಬಗ್ಗೆ ಕೆಲಸವನ್ನು ಹಂಚಿ ಕೊಟ್ಟಿರುತ್ತೇವೆ. ನಮ್ಮ ಗ್ರಾಮ ಪಂಚಾಯತಿಯಲ್ಲಿ ಕಬ್ಬಿಣದ ಅಲಮೇರಾಗಳು ಇವೆ. ಪಂಚಾಯತಿಯ ಕಚೇರಿಯಲ್ಲಿ ಕಡತಗಳನ್ನು ಅಲಮೇರಾದಲ್ಲಿಟ್ಟು ಕೀಲಿ ಹಾಕುತ್ತೇವೆ. ಸಾಕ್ಷಿ ಮುಂದುವರೆದು ಅವಶ್ಯವಿದ್ದ ಕಡತಗಳನ್ನು ಹೊರಗೆ ಇಟ್ಟಿರುತ್ತೇವೆ ಎಂದು ಹೇಳುತ್ತಾರೆ. ಅಲಮೇರಾಗಳ ಕೀಲಿ ಕೈಗಳು ಸಂಬಂಧಿಸಿದ ಸಿಬ್ಬಂದಿ ಮತ್ತು ಪಿ ಡಿ ಓಗಳ ಕಡೆ ಇರುತ್ತದೆ.

11. ಗ್ರಾಮ ಪಂಚಾಯತಿಯಿಂದ ಹೊರಗೆ ಹೋಗಬೇಕಾದಲ್ಲಿ ಮೂವಮೆಂಟ ರಜಿಸ್ಟರದಲ್ಲಿ ಬರೆದು ಹೋಗುತ್ತೇವೆ. ಕಚೇರಿಗೆ ಚಹಾ ಸೇವಿಸುವ ಬಗ್ಗೆ ನಿಗದಿತ ಅವಧಿ ಇರುವುದಿಲ್ಲ. ನಮ್ಮ ಕಚೇರಿಯ ಕೆಲಸದ ಅವಧಿ ಎಂದರೆ ಬೆಳಿಗ್ಗೆ 10 ಘಂಟೆಯಿಂದ ಸಂಜೆ 5-15 ಘಂಟೆ ವರೆಗೆ ಇರುತ್ತದೆ. ಕೆಲಸದ ನಿಮಿತ್ತ ಸಾರ್ವಜನಿಕರು ಬೆಳಿಗ್ಗೆ 10 ಗಂಟೆ ನಂತರ ಬಂದುಹೋಗುತ್ತಿರುತ್ತಾರೆ.

12. ಕಡತಗಳು ಸುಟ್ಟ ಬಗ್ಗೆ ಪಂಚಾಯತಿ ಅಧ್ಯಕ್ಷರು ದೂರು ಕೊಟ್ಟಿರುವುದನ್ನು ನಾನು ನೋಡಿಲ್ಲ. ಪಂಚಾಯತಿಯ ದಾಖಲೆಗಳು ಸುಟ್ಟ ಬಗ್ಗೆ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನು ವಿಚಾರಣೆ ಮಾಡಿದ್ದೇನೆ. ದಿಃ 15-2-2018 ರಂದು ನಾನು ಅವರನ್ನು ವಿಚಾರಣೆ ಮಾಡಿದ್ದೇನೆ. ಆ ದಿನ ನಾನು ಅವರನ್ನು ವಿಚಾರಣೆ ಮಾಡಿಲ್ಲ ಎನ್ನುವುದು ಸರಿಯಲ್ಲ. ದಿಃ 15-2-2018 ರಂದು ನಾನು ದೂರು ಕೊಡುವಾಗ ಕಡತಗಳು ಆಕಸ್ಮಿಕವಾಗಿ ಸುಟ್ಟವು ಎಂದು ನಮ್ಮ ಸಿಬ್ಬಂದಿಗಳಾದ ರುದ್ರಪ್ಪ ಮುರಾರಿ ಮತ್ತು ರಾಮಕೃಷ್ಣ ಬಡಿಗೇರ ನನಗೆ ಹೇಳಿದ್ದಾರೆ.

13. ನಮ್ಮ ಪಂಚಾಯತಿಯ ಕಚೇರಿ ಸುತ್ತಮುತ್ತಲು ಮನೆ , ದೇವಸ್ಥಾನ , ಶಾಲೆಗಳು ಇವೆ. ಸಾಮಾನ್ಯವಾಗಿ ಗ್ರಾಮ ಪಂಚಾಯತಿಯ ಫೈಲಗಳನ್ನು ಆಯಾ ವಿಭಾಗದ ಅಲಮೇರಾದಲ್ಲಿಡುತ್ತಾರೆ. ಸಾಕ್ಷಿ ಮುಂದುವರೆದು ಆ ದಿನ ಫೈಲಗಳ ವೀಕ್ಷಣೆಗಾಗಿ ಟೇಬಲನ ಮೇಲೆ ಇಡಲಾಗಿತ್ತು ಎಂದು ಹೇಳುತ್ತಾರೆ. ನಮ್ಮ ಪಂಚಾಯತಿಯಿಂದ ಎಲ್ಲರೂ ಹೊರಗೆ ಹೋಗಬೇಕಾದಲ್ಲಿ ಕಚೇರಿಗೆ ಕೀಲಿ ಹಾಕಿ ಹೋಗುವುದಿಲ್ಲ. ಕರ್ತವ್ಯದ ಸಮಯದಲ್ಲಿ ಕಚೇರಿಯಿಂದ ಎಲ್ಲ ಸಿಬ್ಬಂದಿಗಳು ಹೊರಗೆ ಹೋಗುವುದಿಲ್ಲ, ಯಾರನ್ನಾದರೂ ಒಬ್ಬರನ್ನು

ಆಫೀಸನಲ್ಲಿಡುತ್ತಾರೆ. ದಿಃ 15-2-2018 ರಂದು ಎನ್ ಎಲ್ ಎಮ್ ಸ್ಕೀಮನಡಿಯಲ್ಲಿ ಕಚೇರಿಯ ಪರೀಕ್ಷೆ ಮಾಡುವ ಸಂದರ್ಭದಲ್ಲಿ ನಾನು ಇರಬೇಕಾದ ಅವಶ್ಯಕತೆ ಇದೆ. ಆ ದಿನ ಎನ್ ಎಲ್ ಎಮ್ ಕಮೀಟಿಯವರು ನಮ್ಮ ಪಂಚಾಯತಿಗೆ ಭೇಟಿ ಕೊಟ್ಟಿಲ್ಲ. ಕಡತ ಸುಟ್ಟ ಬಗ್ಗೆ ನನಗೆ ದೂರು ಕೊಡಲು ಪಂಚಾಯತಿಯವರು ಆದೇಶ ಮಾಡಿದ್ದಾರೆ. ನನ್ನ ಮೇಲಾಧಿಕಾರಿಗಳು ಪೋನ ಮುಖಾಂತರ ದೂರು ಕೊಡಲು ಹೇಳಿದ್ದಾರೆ. ದಿಃ1-3-2018 ರಂದು ನನ್ನ ಮೇಲಾಧಿಕಾರಿಗಳು ದೂರು ಕೊಡಲು ಹೇಳಿದ ಕಾರಣ ದೂರು ಕೊಟ್ಟಿದ್ದೇನೆ ಎಂದು ಬರೆದಿಲ್ಲ.

14. ಪಂಚಾಯತಿ ಅಧ್ಯಕ್ಷರು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳಿಗೆ ಕೊಟ್ಟ ದೂರನ್ನು ನಾನು ನೋಡಿಲ್ಲ. ಸದರಿ ದೂರಿನ ನಕಲು ನಮ್ಮ ಕಚೇರಿಯಲ್ಲಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಹಂಗರಕಿಯ ಪಂಚಾಯತಿ ಕಚೇರಿಯಲ್ಲಿ ನನ್ನ ಅವಧಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿವೆ ಎನ್ನುವುದು ಸರಿಯಲ್ಲ. ನಾನು ಪಿ ಡಿ ಓ ಕೆಲಸವನ್ನು ಶ್ರದ್ದೆಯಿಂದ ಮಾಡಿರಲಿಲ್ಲ ಹಾಗೂ ಕಡತಗಳನ್ನು ಸರಿಯಾಗಿ ಇಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ಬೆಂಕಿ ಹತ್ತಿ ಉರಿಯುವಾಗ ಆರೋಪಿಯನ್ನು ಹಿಡಿಯಲು ನಮ್ಮ ಸಿಬ್ಬಂದಿ ಎನು ಕ್ರಮ ಕೈಗೊಂಡಿದ್ದಾರೆಂದುನಾನು ಅವರಲ್ಲಿ ವೈಯಕ್ತಿಕವಾಗಿ ವಿಚಾರಣೆ ಮಾಡಿಲ್ಲ.

15. ಆರೋಪಿ ಬಲಾಢ್ಯನಾಗಿಲ್ಲ ಅನ್ನುವುದು ನಿಜ. ಎನ್ ಎಲ್ ಎಮ್ ಕಮೀಟಿಯವರು ನಮ್ಮ ಕಚೇರಿ ತಪಾಸಣೆಗಾಗಿ ಬಂದಾಗ ನಾನು ಮಾಡಿದ ಅವ್ಯವಹಾರಗಳು ಕಂಡುಬರುತ್ತದೆ ಎಂದು ಕಡತಗಳಿಗೆ ನಾನೇ ಬೆಂಕಿ ಹಚ್ಚಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಯ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದು ಮತ್ತು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

17-11-2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.